ಸಂಕೇಶ್ವರದ ವಿದ್ಯಾರ್ಥಿ ನಿಲಯಕ್ಕಾಗಿ ಸರ್ವೆ ನಂ. 356-ಎ. ನಲ್ಲಿ 20 ಗುಂಟೆ ಜಮೀನನ್ನು ಪಡೆದುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಜಮೀನಿನಲ್ಲಿ ಅಕ್ರಮ ಸಾಗುವಳಿ ಇದ್ದು, ತೆರವು ಮಾಡಿಸಿ, ಮಂಜೂರು ಮಾಡುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಯಮಕನಮರಡಿ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಈ ಎರಡೂ ಸ್ಥಳಗಳಲ್ಲಿ ಕಟ್ಟಡಕ್ಕಾಗಿ ಸ್ಥಳ ಒದಗಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಸರ್ಕಾರಿ ಭೂಮಿ ಲಭ್ಯವಿಲ್ಲದಿರುವುದರಿಂದ, ದಾನ ರೂಪದಲ್ಲಿ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಪಡೆದುಕೊಳ್ಳುವ ಸಾಧ್ಯತೆಯನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

2. ಬೆಳ್ತಂಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ, ದಾದಿಯರ ಹಾಗೂ ಇತರೆ ಹುದ್ದೆಗಳನ್ನು ಭರ್ತಿ ಮಾಡುವುದು

ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ವೈದ್ಯರ, ದಾದಿಯರ ಹಾಗೂ ಇತರ ವೈದ್ಯಕೀಯ ನೌಕರರ ಹುದ್ದೆಗಳು ಖಾಲಿ ಆಗಿದ್ದರೂ ಸರ್ಕಾರ ಇಷ್ಟರವರೆಗೂ ಗಮನವನ್ನು ಕೊಡಲಿಲ್ಲ. ಇದರಿಂದಾಗಿ ಬೆಳ್ತಂಗಡಿಯ ಜನತೆ ತುಂಬಾ ನೊಂದಿದ್ದಾರೆ. ಕೇವಲ ಆಶ್ವಾಸನೆಗಳನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತುರ್ತಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿರುವ ವೈದ್ಯರ ಮತ್ತು ಆಸ್ಪತ್ರೆಗೆ ಸಂಬಂಧಪಟ್ಟ ಇತರೆ ನೌಕರರ ಹುದ್ದೆಗಳನ್ನು ತುಂಬಬೇಕಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ಬಗ್ಗೆ ಸ್ಪಷ್ಟ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸರ್ಕಾರಿ ಆರ್ಯುವೇದ ಆಸ್ಪತ್ರೆ ಹಾಗೂ 79 ಉಪ ಕೇಂದ್ರಗಳು ಇರುತ್ತವೆ. ಸದರಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವಿವಿಧ ಹುದ್ದೆಗಳ ವಿವರ ಈ ರೀತಿ ಇರುತ್ತದೆ.

ಹುದ್ದೆಯ ಹೆಸರು	ಮಂಜೂರಾತಿ	ಕಾರ್ಯನಿರ್ವಹಣೆ	ಖಾಲಿಹುದ್ದೆ
ವೈದ್ಯಾಧಿಕಾರಿ (ಸಹಾಯಕ ಶಸ್ತ್ರ ಚಿಕಿತ್ಸಕರು)	12	7	5 (ಒಂದು ಮಹಿಳಾ)
ಕ್ಷೇತ್ರ ಆರೋಗ್ಯ ಶಿಕ್ಷಕ	7	-	7
ಫಾರ್ಮಸಿಸ್ಟ್	11	5	6
ಹಿರಿಯ ಆರೋಗ್ಯ ಸಹಾಯಕ	9	4	5
ಕಿರಿಯ ಆರೋಗ್ಯ ಸಹಾಯಕ	22	9	13
ಹಿರಿಯ ಆರೋಗ್ಯ ಸಹಾಯಕಿ	10	10	-
ಕಿರಿಯ ಆರೋಗ್ಯ ಸಹಾಯಕಿ	79	74	5
'ಡಿ' ಪಂಗಡ	24	18	6
ವಾಹನ ಚಾಲಕರು	2	1	1

ಗ್ರಾಮಾಂತರ ಪ್ರದೇಶಗಳಿಗೆ ಗುತ್ತಿಗೆ ಆಧಾರದ ವೈದ್ಯರನ್ನು ನೇಮಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈ ನೇಮಕಾತಿಗಳಲ್ಲಿ ಅಲ್ಲದೇ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಬರುವ ವೈದ್ಯರನ್ನು ನೇಮಿಸುವ ಮೂಲಕ ಖಾಲಿ ಇರುವ ವೈದ್ಯರ ಅದ್ಯತೆ ಮೇಲೆ

ಭರ್ತಿ ಮಾಡಲಾಗುವುದು. ಇಲಾಖಾ ನೇಮಕಾತಿ ಸಮಿತಿಯು ರಚನೆಯಾದ ಕೂಡಲೇ 'ಸಿ' ವರ್ಗದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲಾಗುವುದು. 'ಡಿ' ಪಂಗಡದ ಖಾಲಿ ಹುದ್ದೆಗಳನ್ನು ತುಂಬಲು ಪ್ರತ್ಯೇಕ ಕ್ರಮಕೈಗೊಳ್ಳಲಾಗಿದೆ.

(3) ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ವಿದ್ಯಾಧಿಕಾರಿಗಳ ಹಾಗೂ ಉಪ ನಿರ್ದೇಶಕರುಗಳ ಅಧಿಕಾರ ವ್ಯಾಪ್ತಿ

ಶ್ರೀ ಶಫಿ ಅಹಮದ್ (ತುಮಕೂರು) : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ಅನೇಕ ಖಾಸಗಿ ಪಾಠಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಶಿಕ್ಷಕರ ಅನುಮೋದನೆಯನ್ನು ಈ ಮೊದಲು ತಾಲ್ಲೂಕಿನ ಸಹಾಯಕ ವಿದ್ಯಾಧಿಕಾರಿಗಳು ಹಾಗೂ ಉಪ ನಿರ್ದೇಶಕರುಗಳು ಮಾಡುತ್ತಿದ್ದು, ಇತ್ತೀಚೆಗೆ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಂಡಿರುತ್ತದೆ. ಹೀಗಾಗಿ ದೂರದ ಊರುಗಳಲ್ಲಿರುವ ಅಧ್ಯಾಪಕರುಗಳಿಗೆ ಬೆಂಗಳೂರಿಗೆ ಬಂದು ತಮ್ಮ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಲು ಅಪಾರವಾದ ತೊಂದರೆಯಾಗುತ್ತಿರುವುದಾಗಿ ತಿಳಿದು ಬಂದಿದೆ. ಈ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಅಧಿಕಾರ ವಿಕೇಂದ್ರೀಕರಣದನ್ವಯ ಈ ಅಧಿಕಾರವನ್ನು ಮತ್ತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೊಡಲು ಆದಷ್ಟು ಜಾಗ್ರತೆ ಆದೇಶ ಮಾಡಿದರೆ ಅಧ್ಯಾಪಕರ ಹಿತವನ್ನು ಕಾಪಾಡಿದಂತೆ ಆಗುತ್ತದೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ಖಾಸಗಿ ಪಾಠಶಾಲೆಗಳ ಶಿಕ್ಷಕರ ಅನುಮೋದನೆಯನ್ನು ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ಮಾಡುತ್ತಿದ್ದುದು ನಿಜ. ಹುದ್ದೆಗಳನ್ನು ತುಂಬಲು ಸರ್ಕಾರವು ಆರ್ಥಿಕ ಮಿತವ್ಯಯ ಆದೇಶವನ್ನು ಜಾರಿಗೊಳಿಸಿದ್ದು ಅದು ಶಿಕ್ಷಣ ಇಲಾಖೆಗೂ ಅನ್ವಯಿಸುತ್ತಿತ್ತು. ಸರ್ಕಾರದ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ಹುದ್ದೆಗಳನ್ನು ತುಂಬುವ ಅಗತ್ಯತೆಯನ್ನು ಮನಗಂಡು ಸರ್ಕಾರವು ಮಿತವ್ಯಯ ಆದೇಶವನ್ನು ನಿವೃತ್ತ, ನಿಧನ ಮತ್ತು ರಾಜೀನಾಮೆಯಿಂದ ತೆರವಾದ ಹುದ್ದೆಗಳನ್ನು ತುಂಬಲು ದಿನಾಂಕ 21-7-1992ರ ಆದೇಶದಲ್ಲಿ ಸಡಿಲಿಸಿತು. ನಂತರ ದಿನಾಂಕ 26.3.1993ರ ಆದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರಸ್ತುತ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಲು ಮತ್ತು ಮುಂದೆ ನಿಧನ, ಬಡ್ತಿ, ನಿವೃತ್ತಿ, ರಾಜೀನಾಮೆಯಿಂದ ತೆರವಾಗುವ ಹುದ್ದೆಗಳನ್ನು ಶಿಕ್ಷಣ ಕಾರ್ಯದರ್ಶಿಗಳ ನಿರ್ದಿಷ್ಟ ಅನುಮೋದನೆ ಪಡೆದು ತುಂಬಲು ಆದೇಶಿಸಲಾಗಿದೆ. ಈ ಪ್ರಕಾರ ದಿನಾಂಕ 26.3,93ರ ನಂತರ ತೆರವಾಗುವ ಹುದ್ದೆಗಳನ್ನು ತುಂಬಲು ಶಿಕ್ಷಣ ಕಾರ್ಯದರ್ಶಿಗಳ ನಿರ್ದಿಷ್ಟ ಅನುಮೋದನೆ ಅಗತ್ಯವಿದೆ. ಸಹಾಯಕ ಶಿಕ್ಷಣಾಧಿಕಾರಿಗಳಾಗಲೀ, ಅಥವಾ ಉಪನಿರ್ದೇಶಕರುಗಳು ಆಗಲೀ ಈ ಅಧಿಕಾರವನ್ನು ಚಲಾಯಿಸಲು ಬರುವುದಿಲ್ಲ.

ಹಲವಾರು ಶಿಕ್ಷಣ ಸಂಸ್ಥೆಗಳು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಾದ ಹುದ್ದೆಗಳನ್ನು ಬೇರೆ ವರ್ಗದ ಅಭ್ಯರ್ಥಿಗಳಿಂದ ತುಂಬಿದ್ದು, ಆ ರೀತಿ ತುಂಬಿದ ಹುದ್ದೆಗಳು ಬ್ಯಾಕ್‌ಲಾಗ್ ಹುದ್ದೆಗಳಾಗುತ್ತವೆ. ಸದರಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದಲೇ ತುಂಬತಕ್ಕದ್ದೆಂದು ಸರ್ಕಾರವು ಆದೇಶಿಸಿದೆ. ಈ ಆದೇಶವನ್ನು ಸರಿಯಾಗಿ ಅನುಷ್ಠಾನಗೊಳಿಸಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದಲೇ ತುಂಬತಕ್ಕದ್ದೆಂದು ಸರ್ಕಾರವು ಆದೇಶಿಸಿದೆ. ಈ ಆದೇಶವನ್ನು ಸರಿಯಾಗಿ ಅನುಷ್ಠಾನಗೊಳಿಸಿ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ದೊರಕಿಸಿ ಕೊಡುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಮತ್ತು ಉಪನಿರ್ದೇಶಕರುಗಳಿಗೆ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸಲು ಇದ್ದ ಅಧಿಕಾರವನ್ನು ಸರ್ಕಾರ ಪಡೆದಿದೆ. ಮೀಸಲಾತಿ ನಿಯಮ ಮತ್ತು ಇತರ ಷರತ್ತುಗಳನ್ನು ಪೂರೈಸಲಾದ ಪ್ರಸ್ತಾವನೆಗಳನ್ನು